**ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 72 ರ ನಿಯಮದದಡಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯ ರಾದ ಶ್ರೀ ಗೋವಿಂದರಾಜು ಇವರು ಪ್ರಸ್ತಾಪಿಸಿರುವ ಗಮನ ಸೆಳೆಯುವ ವಿಷಯ**

**ಪ್ರಶ್ನೆ:** 2023ನೇ ಇಸವಿ ರಾಜ್ಯದ ರೈತರ ಪಾಲಿಗೆ ಕರಾಳ ವರ್ಷ ಎನ್ನಬಹುದು, ನೈರುತ್ಯ ಮುಂಗಾರು ಕೈಕೊಟ್ಟಿದ್ದು, ಒಂದಾದರೆ ವಿವಿಧ ಕಾರಣದಿಂದ ಸಂಭವಿಸಿದ ಬೆಳೆಹಾನಿ ಪರಿಣಾಮ ಮಾಡಿದ್ದ ಸಾಲ ತೀರಿಸಲಾಗದ ದುಸ್ಥಿತಿಯಿಂದ ದೊಡ್ಡ ಸಂಖ್ಯೆಯಲ್ಲಿ ಅನ್ನದಾತರು ಸಾವಿನ ಮನೆಯ ಕದ ತಟ್ಟಿದ್ದಾರೆ. ಈ ವರ್ಷದ ಏಪ್ರಿಲ್ 1 ರಿಂದ ಸೆಪ್ಟೆಂಬರ್ 9 ವರೆಗೆ ರಾಜ್ಯದಲ್ಲಿ ಒಟ್ಟಾರೆ ಜೀವ ಕಳೆದುಕೊಂಡಿರುವ ಬಗ್ಗೆ ದಾಖಲಾಗಿರುವ ಪ್ರಕರಣಗಳ ರೈತರ ಸಂಖ್ಯೆ ಬರೋಬ್ಬರಿ 251. ಒಟ್ಟಾರೆ ಪ್ರಕರಣಗಳನ್ನು ಸರ್ಕಾರದ ಪರಿಶೀಲನೆಯ ಬಳಿಕ 18 ಆತ್ಮಹತ್ಯೆ ಪ್ರಕರಣಗಳನ್ನು ತಿರಸ್ಕೃತಗೊಳಿಸಲಾಗಿದೆ. ಅಷ್ಟೇ ಅಲ್ಲದೆ 174 ರೈತರು ಆತ್ಮಹತ್ಯೆಗೆ ಶರಣಾಗಿರುವ ಬಗ್ಗೆ ಸರ್ಕಾರವೇ ಒಪ್ಪಿಕೊಂಡಿದೆ. 59 ಆತ್ಮಹತ್ಯೆಗಳು ಪರಿಹಾರಕ್ಕೆ ಯೋಗ್ಯವೇ ಎಂಬ ಬಗ್ಗೆ ಅಂತಿಮ ತೀರ್ಮಾನ ಆಗಿಲ್ಲ. 39 ಪ್ರಕರಣಗಳಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕೃತ ವರದಿಯನ್ನು ನಿರೀಕ್ಷೆ ಮಾಡಲಾಗುತ್ತಿದೆ. ಮತ್ತಿತರ ದಾಖಲಾತಿ ಕಾರಣಕ್ಕೆ 20 ರೈತರ ಆತ್ಮಹತ್ಯೆ ಪ್ರಕರಣಗಳನ್ನು ಕಾಯ್ದಿರಿಸಲಾಗಿದೆ. ಈ ವಿಷಯವು ರೈತರ ಹಿತದೃಷ್ಟಿಯಿಂದ ತುಂಬ ಮಹತ್ವದಾಗಿರುವುದರಿಂದ ವಿಷಯವನ್ನು ಮಾನ್ಯ ಕೃಷಿ ಸಚಿವರ ಗಮನಸೆಳೆಯಲು ಬಯಸುತ್ತೇನೆ.

**ಉತ್ತರ:**

2023-24ನೇ ಸಾಲಿನ ನೈರುತ್ಯ ಮಾರುತ (1ನೇ ಜೂನ್ ರಿಂದ 30ನೇ ಸೆಪ್ಟೆಂಬರ್ ರವರೆಗೆ) ಸಾಮಾನ್ಯ ಮಳೆ 852 ಮಿ.ಮಿ. ಆಗಬೇಕಿದ್ದು, ಪ್ರತಿಯಾಗಿ ವಾಸ್ತವಿಕ ಸರಾಸರಿ ಮಳೆ 642 ಮಿ.ಮಿ. ಆಗಿ, ಶೇಕಡಾ 25 ರಷ್ಟು ಮಳೆ ಕೊರತೆ ಇರುತ್ತದೆ.

ಜಿಲ್ಲೆಗಳಿಂದ ಪಡೆದಂತಹ ವರದಿಗಳ ಪ್ರಕಾರ ಮುಂಗಾರು ಹಂಗಾಮಿನಲ್ಲಿ ಕೃಷಿ ಬೆಳೆಗಳ ಪ್ರಸ್ತಾವಿತ ಬಿತ್ತನೆ ಗುರಿ **82.35** ಲಕ್ಷ ಹೆಕ್ಟೇರ್ ಗೆ ಪ್ರತಿಯಾಗಿ **74.32** ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆಯಾಗಿದೆ.

ನೈರುತ್ಯ ಮುಂಗಾರು ಕುಂಠಿತವಾದ್ದರಿಂದ, ಕಂದಾಯ ಇಲಾಖೆಯ ಸರ್ಕಾರದ ಆದೇಶದ ಸಂಖ್ಯೆ: ಕಂಇ 449 ಟಿಎನ್ ಆರ್ 2023, ದಿನಾಂಕ: 13-09-2023, 12-10-2023 ಮತ್ತು 04-11-2023 ರಂತೆ ಒಟ್ಟು 236 ತಾಲ್ಲೂಕುಗಳ ಪೈಕಿ 223 ತಾಲ್ಲೂಕುಗಳನ್ನು ಬರ ಪೀಡಿತ ಪ್ರದೇಶ ಎಂದು ಘೋಷಿಸಲಾಗಿದೆ, ಇವುಗಳಲ್ಲಿ 196 ತಾಲ್ಲೂಕುಗಳನ್ನು ತೀವ್ರ ಮತ್ತು 27 ತಾಲ್ಲೂಕುಗಳನ್ನು ಮಧ್ಯಮ ಬರಪೀಡಿತ ಪ್ರದೇಶ ಎಂದು ಘೋಷಿಸಲಾಗಿದೆ.

**ಎಸ್‌ಡಿಆರ್‌ಎಫ್ ಮಾರ್ಗಸೂಚಿಗಳ ಪ್ರಕಾರ ಕೇಂದ್ರ ಸರ್ಕಾರದ ನೆರವು:**

ಎಸ್‌ಡಿಆರ್‌ಎಫ್ ಮಾರ್ಗಸೂಚಿಗಳನ್ವಯ ಪ್ರತಿ ಹೆಕ್ಟೇರ್‌ಗೆ ಮಳೆಯಾಶ್ರಿತ ಬೆಳೆಗಳಲ್ಲಿ ರೂ.8500/- ಮತ್ತು ನೀರಾವರಿ ಬೆಳೆಗಳಲ್ಲಿ ಪ್ರತಿ ಹೆಕ್ಟೇರ್‌ಗೆ ರೂ.17000/- ಇನ್‌ಪುಟ್ ಸಬ್ಸಿಡಿ ನಿಗದಿಪಡಿಸಲಾಗಿದೆ.

ಜಂಟಿ ಸಮೀಕ್ಷೆ ವರದಿಗಳನ್ವಯ 46.11 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಶೇ.33 ಕ್ಕಿಂತ ಹೆಚ್ಚು ಕೃಷಿ ಬೆಳೆಗಳು ನಷ್ಟವಾಗಿರುತ್ತದೆ, ಅದರಲ್ಲಿ 33.50 ಲಕ್ಷ ಹೆಕ್ಟೇರ್ ಪ್ರದೇಶವು ಸಣ್ಣ ಮತ್ತು ಅತಿ ಸಣ್ಣ (SMF) ರೈತರ ವರ್ಗಕ್ಕೆ ಸೇರಿದ್ದು, ಸದರಿ ರೈತರಿಗೆ ರೂ.3234.76 ಕೋಟಿ ಮತ್ತು 12.61 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಇತರೆ ರೈತರ (OSMF) ಬೆಳೆಹಾನಿಯಾಗಿದ್ದು, ಸದರಿ ರೈತರಿಗೆ ರೂ. 1196.33 ಕೋಟಿ ಪರಿಹಾರ ಲೆಕ್ಕಹಾಕಲಾಗಿದ್ದು, ಒಟ್ಟು **ರೂ.4431.09 ಕೋಟಿ** ನೆರವನ್ನು ಕೋರಿ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಗಿರುತ್ತದೆ.

**ರೈತರ ಆತ್ಮಹತ್ಯೆ**: ರಾಜ್ಯದಲ್ಲಿ 2023-24ನೇ ಸಾಲಿನಲ್ಲಿ ನವಂಬರ್ -2023 ಅಂತ್ಯಕ್ಕೆ (1ನೇ ಏಪ್ರಿಲ್ 2023 ರಿಂದ ನವೆಂಬರ್ 29, 2023 ರವರೆಗೆ) ಒಟ್ಟು 450 ಆತ್ಮಹತ್ಯೆ ಪ್ರಕರಣಗಳು ವರದಿಯಾಗಿದ್ದು ಈ ಪೈಕಿ 344 ಅರ್ಹ ಪ್ರಕರಣಗಳಲ್ಲಿ 250 ಪ್ರಕರಣಗಳಿಗೆ ಪರಿಹಾರ ಪಾವತಿಯಾಗಿದ್ದು 94 ಪ್ರಕರಣಗಳು ಪರಿಹಾರಕ್ಕೆ ಬಾಕಿ ಇರುತ್ತವೆ. ಉಳಿದಂತೆ 60 ಪ್ರಕರಣಗಳು ಉಪವಿಭಾಗಾಧಿಕಾರಿಗಳ ಸಮಿತಿಯಲ್ಲಿ ತೀರ್ಮಾನಕ್ಕೆ ಬಾಕಿ ಉಳಿದಿದ್ದು ಇನ್ನುಳಿದ 46 ಪ್ರಕರಣಗಳು ಅರ್ಹತೆ ಇಲ್ಲದಿರುವುದರಿಂದ ತಿರಸ್ಕೃತಗೊಂಡಿರುತ್ತದವೆ.

ಸರ್ಕಾರದ ಆದೇಶ ಸಂಖ್ಯೆ ಕೃತೋಇ 280 ಕೃಉಇ 2003 ಬೆಂಗಳೂರು ದಿನಾಂಕ:18.07.2003 ರನ್ವಯ ರೈತರ ಆತ್ಮಹತ್ಯೆ ಪ್ರಕರಣಗಳನ್ನು ಇತ್ಯರ್ಥಪಡಿಸಲು ಸರ್ಕಾರವು ಉಪವಿಭಾಗ ಮಟ್ಟದಲ್ಲಿ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದು ಆಯಾ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು ಸದಸ್ಯ ಕಾರ್ಯದರ್ಶಿಗಳಾಗಿದ್ದು, ಆಯಾ ತಾಲ್ಲೂಕಿನ ತಹಶೀಲ್ದಾರ್, ಆತ್ಮಹತ್ಯೆ ಮಾಡಿಕೊಂಡ ರೈತನ ಸ್ಥಳದ ಆರ್ಥಿಕ ವ್ಯಾಪ್ತಿ ಹೊಂದಿರುವ ಸರ್ಕಲ್ ಇನ್ಸಪೆಕ್ಟರ್, ಆತ್ಮಹತ್ಯೆ ಮಾಡಿಕೊಂಡ ರೈತನ ಸ್ಥಳದ ಆರ್ಥಿಕ ವ್ಯಾಪ್ತಿ ಹೊಂದಿರುವ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು ಸದಸ್ಯರಿದ್ದು, ಸಮಿತಿಯು ತೀರ್ಮಾನಿಸುವ ಪ್ರತಿ ಅರ್ಹ ಪ್ರಕರಣಗಳಿಗೆ ದಿನಾಂಕ:01.04.2015 ರಿಂದ ರೂ.5.00 ಲಕ್ಷ ಪರಿಹಾರಧನವನ್ನು ವಿತರಿಸಲಾಗುತ್ತಿದೆ.

2020-21 ನೇ ಸಾಲಿನಿಂದ ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ಅರ್ಹ ಪ್ರಕರಣಗಳಿಗೆ ಪರಿಹಾರ ನೀಡುವ ಯೋಜನೆಯು ಕಂದಾಯ ಇಲಾಖೆಗೆ ವರ್ಗಾವಣೆಗೊಂಡಿರುತ್ತದೆ.

**ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಸರ್ಕಾರದಿಂದ ಕೆಳಗಿನ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ:**

ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ಪ್ರತಿ ಅರ್ಹ ರೈತರ ಕುಟುಂಬಗಳಿಗೆ ದಿನಾಂಕ: 01.04.2015ರಿಂದ ಜಾರಿಗೆ ಬರುವಂತೆ ರೂ. 5.00 ಲಕ್ಷ ಪರಿಹಾರ ನೀಡಲಾಗುತ್ತಿದೆ. ಇದಲ್ಲದೆ, ಮೃತ ರೈತನ ಪತ್ನಿಗೆ ರೂ.2000/-ಗಳ ವಿಧವಾ ಮಾಸಾಶನವನ್ನು ಕಂದಾಯ ಇಲಾಖೆಯಿಂದ ನೀಡಲಾಗುತ್ತಿದೆ. ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಸ್ನಾತಕೋತ್ತರ ಪದವಿಯ ಹಂತದವರೆಗೆ ಶಿಕ್ಷಣವನ್ನು ಮುಂದುವರಿಸಲು ಅನುವಾಗುವಂತೆ ಉಚಿತ ಶಿಕ್ಷಣ ಮತ್ತು ವಸತಿ ಸೌಲಭ್ಯವನ್ನು ಶಿಕ್ಷಣ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಒದಗಿಸಲಾಗುತ್ತಿದೆ.

**ರೈತರ ಆತ್ಮಹತ್ಯೆ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳು:**

ರೈತರ ಆತ್ಮಹತ್ಯೆ ಕುರಿತು ಅಧ್ಯಯನ ನಡೆಸಲು ಸರ್ಕಾರವು 2001 ರಲ್ಲಿ ಡಾ. ಜಿ.ಕೆ. ವೀರೇಶ್, ನಿವೃತ್ತ ಉಪ ಕುಲಪತಿಗಳು, ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತ್ತು. ಸದರಿ ಸಮಿತಿಯು ರೈತರ ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಮತ್ತು ಸಾಂಸಾರಿಕ ಸಮಸ್ಯೆಗಳು, ಸಾಮರ್ಥ್ಯಕ್ಕೆ ಮೀರಿ ಸಾಲ, ಬೆಳೆ ನಷ್ಟ ಇವೇ ಮುಂತಾದವು ರೈತರ ಆತ್ಮಹತ್ಯೆಗೆ ಕಾರಣಗಳಾಗಿರುತ್ತವೆಂದು ವರದಿ ನೀಡಿರುತ್ತದೆ.

ರೈತರ ಆತ್ಮಹತ್ಯೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ರೈತರ ಶ್ರೇಯೋಭಿವೃದ್ಧಿಗಾಗಿ ಮತ್ತು ಅವರಲ್ಲಿ ಆತ್ಮಸ್ಥೈರ್ಯ ತುಂಬಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ್ಯೂ ಸಹ ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗುತ್ತಿರುವುದು ಕಂಡುಬಂದಿದೆ. ರೈತರ ಆತ್ಮಹತ್ಯೆ ತಡೆಯಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗಿ ಸಾಲಬಾಧೆಯಿಂದ ಸಂಭವಿಸುತಿದ್ದು ಜಿಲ್ಲಾಮಟ್ಟದಲ್ಲಿ ಮತ್ತು ಉಪ ವಿಭಾಗ ಮಟ್ಟದಲ್ಲಿ ರಾಜ್ಯದಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ 'Karnataka Money Lenders Act 1961, The Karnataka Pawn Brokers Act-1961, Chit Fund Act-1982 ಮತ್ತು The Karnataka Prohibhition of Charging Exorbitant Interest Act -2004 ರಡಿ ಇರುವ ನಿಯಂತ್ರಣ ಅವಕಾಶಗಳನ್ನು ಮತ್ತು ಕಾಯಿದೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಬಗ್ಗೆ ಖಚಿತಪಡಿಸಿಕೊಳ್ಳಲು ಸಮಿತಿಗಳನ್ನು ರಚಿಸಲಾಗಿದೆ.

ಸ್ಥಳೀಯ ಸಾಲಗಾರರಿಂದ ರೈತರ ಶೋಷಣೆ ತಡೆಯುವ ಕುರಿತು ಉಸ್ತುವಾರಿ / ನಿಗಾ ವಹಿಸಲು ಜಿಲ್ಲಾ ಮಟ್ಟದಲ್ಲಿ ಮತ್ತು ಉಪವಿಭಾಗ ಮಟ್ಟದಲ್ಲಿ ಸಮಿತಿಗಳನ್ನು ರಚಿಸಲಾಗಿದೆ. ಈ ಜಿಲ್ಲಾ ಮಟ್ಟದ / ಉಪವಿಭಾಗ ಮಟ್ಟದ ಸಮಿತಿಯಲ್ಲಿ ಕಂದಾಯ, ಪೋಲೀಸ್, ಕೃಷಿ, ತೋಟಗಾರಿಕೆ, ಸಹಕಾರ, ಪಶುಸಂಗೋಪನೆ ಇಲಾಖೆಯ ಅಧಿಕಾರಿಗಳು ಸದಸ್ಯರಿದ್ದು, ದುಬಾರಿ ಬಡ್ಡಿಯಿಂದ ಬಾಧಿತರಾದ ರೈತರನ್ನು ರಕ್ಷಿಸಲು ಸಹಕಾರ ಇಲಾಖೆ ವತಿಯಿಂದ ಕ್ರಮ ವಹಿಸಲಾಗಿದೆ.

ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಲು ಕೃಷಿ ಇಲಾಖೆಯಿಂದ ರೈತರ ಅನುಕೂಲಕ್ಕಾಗಿ ವಿವಿಧ ಯೋಜನೆ / ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

**ಸಂಖ್ಯೆ:AGRI/227/AML/2023**

**(ಎನ್. ಚಲುವರಾಯಸ್ವಾಮಿ)**
**ಕೃಷಿ ಸಚಿವರು.**